ಆಗೂದು ಬಿಡೂದು ನಂನಮ್ಮ ಹಣೇಬರಾ – ಆಗೆಲ್ಲ ಅವಳ ಗಂಟಲಲ್ಲಿ ಕಾದ ಸೀಸದ ಗುಂಡು ಉರುಳಾಡಿದಂತಾಗುತ್ತದೆ. ಯಾಕೆ ಸುಕಾಸುಮ್ಮನೆ ಕೆಲವರ ಹಣೆಬರಾ ಹಿಂಗೆ ಡಬ್ಬುಗೆಡವಿರುತ್ತದೆ? ತಪ್ಪು ಮಾಡುವುದು ಮಾಡುವ ವಾಂಛೆ ಹುಟ್ಟುವುದು ಹಣೆಬರಾದ ಫಲವೇ? ಹಾಗಿರಲು ಸಾಧ್ಯವೇ? ಈ ಜನ್ಮಕ್ಕೆ ಬರುವಾಗಲೇ ಬುದ್ಧಿಯನ್ನು ಕಟ್ಟಿಕೊಂಡಿರುತ್ತೇವೆಯಲ್ಲವೇ? ಶಂಕರಿ ಎಲ್ಲೋ ಕಣ್ಣುನೆಟ್ಟು ಗದ್ದೆಯ ಬೆರ್ಚಿನ ಹಾಗೆ ಕೂತುಬಿಡುತ್ತಾಳೆ. ಮಕ್ಕಳಂತೂ ಅವ್ವನ ಯಾತನೆಯ ಜೆರಾಕ್ಸ್ ಪ್ರತಿಗಳಾಗಿ ಬಿಟ್ಟಿವೆ. ಎಲ್ಲ ಹುಡುಗೀರ ಹಾಗೆ ತಮಗೂ ಯಾಕೆ ಸಿನಿಮಾ, ಡಾಲ್ಫಿನ್ ಪಾರ್ಕ್, ಹುಡುಗನ ಸಿಳ್ಳೆ, ಖುಷಿಯ ವಿಷಯವಾಗಿಲ್ಲ ಅಂತ ಗಾಬರಿಬೀಳ್ತಾನೂ ಇದ್ದಾವೆ. ಹಿಂದಿನ ವರ್ಷ ಕಾಲೇಜಿಗೆ ಹೊರಟ ಮಧುವನ್ನು ಇದೇ ಪ್ರದೀಪ ಮಾವ, 'ಮಧೂನ್ನ ಮುಂದಿನ ವರ್ಷ ಗಂಡನಮನಿ ಕಳ್ಸೂಣು' ಅಂತ ರೇಗಿಸಿದ್ದ. ಮಧೂಗೆ ಅಳು ಬಂದಿತ್ತು. ಯಾವ ಭರವಸೆಯ ಮೇಲೆ ತಾನು ಯಾರದೋ ಹೆಂಡತಿಯಾಗಲಿ? ಹಾಗಂತ ಮದ್ವೆ ಬೇಡ ಅಂತ ಅವ್ವನಿಗೆ ಅಜ್ಜನಿಗೆ ಸಮಸ್ಯೆ ಮಾಡುವ ಇರಾದೆಯೂ ಇರಲಿಲ್ಲ. ಎಲ್ಲ ಮೊದಲಿನಂತೇ ಇದ್ದಿದ್ದರೆ, ಈ ಪ್ರದೀಪ ಮಾವ ರಜೆಗಷ್ಟೇ ಮನೆಗೆ ಬಂದಿದ್ದರೆ... ಮತ್ತದೇ ಹುಡುಗಾಟದ ಪ್ರದೀಪ ಮಾವನನ್ನು ಕಾಣಬಹುದಿತ್ತೇನೋ.

ಒಬ್ಬೊಬ್ಬರೂ ಮನಸ್ಸಿನಲ್ಲಿ ಒಂದೊಂದು ಬಗೆಯಲ್ಲಿ ಸುತ್ತತಾ ಬಿಚ್ಚತಾ ಏನೂ ಸಿಗಲಾರದೋರಂತೆ ಸಿಗಬೇಕಾದದ್ದು ಏನು ಅಂತಾನೂ ತಿಳಿಯದವರಂತೆ ದಿಕ್ಕೆಟ್ಟಿದ್ದರು. ಪೂರ್ತಿ ರಿಪೇರಿಯಾಗಿ ಹೊಸಾ ಮದುವಣಗಿತ್ತಿಯಂತಾದ ಮನೆಮುಂದೆ ತೂಗಿದ ಆಕಾಶಬುಟ್ಟಿ ಇನ್ನೂ ಇಳಿಸಿಲ್ಲ. ಕಾರ್ತಿಕ ಮುಗದಿಲ್ಲ. ನಾವೀಮನಿ ಬಿಡೋಹಾಂಗಾಯ್ತಲ್ಲ. ಅಕ್ಕಪಕ್ಕದವರ ಮುಂದೆ, ಮರ್ಯಾದೆಗೇಡು ಗತಿ ಬಂತಲ್ಲ. ತನ್ನ ಕೈಗುಣವೇ ಹಿಂಗೆ ಉಪರಾಟೆಯಿದೆಯೇ? ಏನು ಮಾಡಿದರೂ ಯಾವುದೂ ದಕ್ಕುತ್ತಿಲ್ಲ ಅನ್ನಿಸಿ ಮಂಜುಗಣ್ಣಿಂದ ಮಕ್ಕಳ ಕಡೆ ನೋಡಿದಳು. ಕಳೆದೊಂದು ವಾರದಿಂದ ಇವು ನಗೋದನ್ನೇ ಮರ್ತು ಒಂಥರಾ ಅರೆಸತ್ತವರಂತಾಗಿಬಿಟ್ಟಾವೆ. ತಿಂಗಳ ಹಿಂದೆ, ಹೊಸಮನೆಯ ಕಪಾಟಿನಲ್ಲಿ ಇದು ನಂದು, ಇದು ನಂದು ಅಂತ ತಂತಮ್ಮ ಬಟ್ಟೆ–ಪುಸ್ತಕ ಹೊಂದಿಸಿಕೊಂಡ ಮಕ್ಕಳು ಈಗ, ತಾವು ಅತ್ತರೆ ಅವ್ವ ಬೇಯುತ್ತಾಳೆ ಅನ್ನೋ ಖಬರಿನಲ್ಲಿ ಅಸಾಧ್ಯ ಮೌನದಲ್ಲಿ ಒಂದೊಂದು ಗೋಣಿಚೀಲದಲ್ಲಿ ಹಾಗೆ ಹಾಗೇ ತಮ್ಮ ವಸ್ತುಗಳನ್ನು ಇಳಿಸಿ ಬಾಯ್ಕಟ್ಟುತ್ತಿದ್ದರು. ಕೈಕಾಲಿಗೆ ತಾಕುವಂತಿದ್ದ ಆ ಕೆಡುಮೌನವನ್ನು ಕಲಕಿಬಿಡುವಂತೆ ಮಧು, 'ಸಂಧ್ಯಾ, ಬೇಗ ತುಂಬು. ಅರ್ಧ ತಾಸಿಗೆ ಅಲ್ಲೋಗಿ

